

# ಅಕ್ಷಯ್‌ಗೂ 'ಭಾರತ'ವೇ ಲೇಸು

'ಇಂಡಿಯಾ' ಎನ್ನುವುದು ಇನ್ನುಮುಂದೆ 'ಭಾರತ' ಎಂದು ಬದಲಾಗುತ್ತದೆ – ಹೀಗೊಂದು ನಿರೀಕ್ಷೆಗೆ ಕೇಂದ್ರ ಸರ್ಕಾರವೇ ರೆಕ್ಕೆಪುಕ್ಕ ಹಚ್ಚಿಬಿಟ್ಟಿದೆ. ಆ ರೆಕ್ಕೆ ಕಂಡು ಈಗಾಗಲೇ ಕೆಲವರು ಹಾರಾಡತೊಡಗಿದ್ದಾರೆ. ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ ಕ್ರಿಕೆಟಿಗರ ಜೆರ್ಸಿ ಮೇಲೆಲ್ಲಾ ಭಾರತ ಎಂದೇ ಬರೆಸಬೇಕು ಎಂದು ಫರ್ಮಾನು ಹೊರಡಿಸುವ ಧಾಟಿಯಲ್ಲಿ ಪ್ರತಿಕ್ರಿಯಿಸಿದ್ದನ್ನು ಕೇಳಿದ್ದೇವೆ. ಎಲ್ಲೆಲ್ಲಿ 'ಇಂಡಿಯಾ' ಎಂದು ಇದೆ, ಯಾವಾಗ 'ಭಾರತ' ಎನ್ನುವ ಉಲ್ಲೇಖ ಆಯಿತು ಎಂಬೆಲ್ಲ ಚರ್ಚೆಗಳು ಕೂಡ ನಡೆಯುತ್ತಿರುವ ಈ ಹೊತ್ತಲ್ಲಿ ಅಕ್ಷಯ್ ಕುಮಾರ್ ಸೆಪ್ಟೆಂಬರ್ 6ರಂದು ಒಂದು ಅಚ್ಚರಿ ಕೊಟ್ಟರು.

ಅವರ ಹೊಸ ಚಿತ್ರಕ್ಕೆ 'ಮಿಶನ್ ರಾಣಿಗಂಜ್: ದಿ ಗ್ರೇಟ್ ಇಂಡಿಯನ್ ರೆಸ್ಕ್ಯೂ' ಎಂಬ ಇಂಗ್ಲಿಷ್ ಹೆಸರನ್ನು ಇಟ್ಟಿದ್ದರು. ಒಂದು ಸಣ್ಣ ಟೀಸರ್ ಬಿಡುಗಡೆ ಮಾಡಿ, 'ಮಿಶನ್ ರಾಣಿಗಂಜ್: ದಿ ಗ್ರೇಟ್ ಭಾರತ್ ರೆಸ್ಕ್ಯೂ' ಎಂದು ಶೀರ್ಷಿಕೆಯನ್ನೇ ಬದಲಿಸಿರುವ ಸೂಚನೆಯನ್ನು ಅವರು ನೀಡಿದರು.

ರಾಣಿಗಂಜ್‌ನ ಕಲ್ಲಿದ್ದಲು ಗಣಿಯಲ್ಲಿ 1989ರಲ್ಲಿ ನಡೆದ ನಿಜ ಬದುಕಿನ ಘಟನಾವಳಿಗಳನ್ನು ಈ ಸಿನಿಮಾ ಒಳಗೊಂಡಿದೆ. ಗಣಿಗಾರಿಕೆ ನಡೆದ ಸ್ಥಳದಲ್ಲಿ ಸಿಲುಕಿದ್ದವರೆಲ್ಲರನ್ನು ರಕ್ಷಿಸಿದ್ದ ಜಸ್ವಂತ್ ಸಿಂಗ್ ಗಿಲ್ ಪಾತ್ರದಲ್ಲಿ ಅಕ್ಷಯ್ ಕುಮಾರ್ ಅಭಿನಯಿಸಿದ್ದಾರೆ. ಟಿನು ಸುರೇಶ್ ದೇಸಾಯಿ ನಿರ್ದೇಶನದ ಈ ಸಿನಿಮಾದಲ್ಲಿ ಪರಿಣೀತಿ ಚೋಪ್ರಾ, ಪವನ್ ಮಲ್ಹೋತ್ರ, ಕುಮುದ್ ಮಿಶ್ರಾ, ರವಿ ಕಿಶನ್ ಮೊದಲಾದವರೂ ನಟಿಸಿದ್ದಾರೆ. ಅಕ್ಟೋಬರ್ 6ರಂದು ಸಿನಿಮಾ ತೆರೆಕಾಣಲಿದೆ. ಟಿನು ಸುರೇಶ್ ಈ ಹಿಂದೆ ಅಕ್ಷಯ್ ಕುಮಾರ್ ಅವರೇ ನಾಯಕರಾಗಿದ್ದ 'ರುಸ್ತುಂ' ಹಿಂದಿ ಸಿನಿಮಾ ನಿರ್ದೇಶಿಸಿದ್ದರು. ಅದು ಬಾಕ್ಸ್‌ಆಫೀಸ್‌ನಲ್ಲಿ ಯಶಸ್ವಿಯಾಗಿತ್ತು. ಈ ವರ್ಷ ಅಕ್ಷಯ್ ಅಭಿನಯದ 'ಸೆಲ್ಫಿ', 'ಒಎಂಜಿ2' ಎರಡೂ ಸದ್ದು ಮಾಡಲಿಲ್ಲ. ಹೀಗಾಗಿ ಈ ಚಲನಚಿತ್ರದ ಗೆಲುವು ಅವರಿಗೆ ಮುಖ್ಯವಾಗಿದೆ.

'ಇಂಡಿಯಾ' ಎನ್ನುವ ಹೆಸರನ್ನು 'ಭಾರತ್' ಎಂದು ಬದಲಾಯಿಸಲು ಸರ್ಕಾರ ಹೊರಟಿದೆ ಎಂಬ ವಿಷಯವು ಈಗ ಕಾವು ಪಡೆದುಕೊಂಡಿದೆ. ಹೀಗಾಗಿ ಅಂತಿಮ ಕ್ಷಣದಲ್ಲಿ ಸಿನಿಮಾ ಬಿಡುಗಡೆಗೆ ತಕರಾರು ಬರಬಾರದು ಎಂದು ಅಕ್ಷಯ್ ಚಿತ್ರದ ಹೆಸರನ್ನು ಈಗಲೇ ಬದಲಾಯಿಸಿದ್ದಾರೆ. ■

# ರಶ್ಮಿಕಾ-ವಿಜಯ್ ಸಹಜೀವನ ಸಂಕಥನ

ರಶ್ಮಿಕಾ ಮಂದಣ್ಣ, ವಿಜಯ್ ದೇವರಕೊಂಡ ಇಬ್ಬರ ನಡುವಿನ ಪ್ರೇಮ ಸಮಾಚಾರಕ್ಕೆ ಅಲ್ಪವಿರಾಮ ಸಿಕ್ಕಿತ್ತು. ಆದರೆ, ಇನ್‌ಸ್ಟಾಗ್ರಾಂನಲ್ಲಿ ಅವರಿಬ್ಬರೂ ಹಂಚಿಕೊಳ್ಳುತ್ತಾ ಬಂದಿರುವ ಫೋಟೊಗಳನ್ನು ಗಮನಿಸಿಯೇ ಚಿತ್ರರಸಿಕರು ತಾವಾಗಿಯೇ ಒಂದು ಊಹೆಗೆ ಬಂದಿದ್ದಾರೆ. ಹೀಗಾಗಿ ಅವರ ಪ್ರೇಮ ಸಮಾಚಾರವೀಗ ಮತ್ತೆ ಮುನ್ನೆಲೆಗೆ ಬಂದಂತಾಗಿದೆ. 'ರಶ್ಮಿಕಾ, ವಿಜಯ್ ಇಬ್ಬರೂ ಒಂದೇ ಮನೆಯಲ್ಲಿ ಸಹಜೀವನ ನಡೆಸುತ್ತಿದ್ದಾರೆ' ಎಂದು ಅನೇಕರು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರತಿಕ್ರಿಯೆ ಹಂಚಿಕೊಂಡಿದ್ದಾರೆ.

ಇದಕ್ಕೆ ಕಾರಣವಿಷ್ಟೆ: ವಿಜಯ್ ದೇವರಕೊಂಡ ಇನ್‌ಸ್ಟಾಗ್ರಾಂನಲ್ಲಿ ತಾವು ವಿವಿಧ ಭಂಗಿಗಳಲ್ಲಿ ಕುಳಿತ, ನಿಂತ ಫೋಟೊಗಳನ್ನು ಪೋಸ್ಟ್ ಮಾಡಿದ್ದರು. ರಶ್ಮಿಕಾ ತಮ್ಮ ಸಹಾಯಕಿಯ ಮದುವೆಗೆ ಹೊರಟಾಗ ಕಡು ಹಳದಿ ಬಣ್ಣದ ಸೀರೆಯುಟ್ಟು ನಿಂತ ಫೋಟೊಗಳನ್ನು ಕೆಲವು ದಿನಗಳ ನಂತರ ಪೋಸ್ಟ್ ಮಾಡಿದ್ದರು. ಅವರಿಬ್ಬರೂ ಪೋಸ್ಟ್ ಮಾಡಿದ್ದ ಫೋಟೊಗಳ ಹಿನ್ನೆಲೆಯಲ್ಲಿ ಕಂಡ ವಿವರಗಳನ್ನು ಸೂಕ್ಷ್ಮವಾಗಿ ಗಮನಿಸಿದ ಅಭಿಮಾನಿಗಳು, ಇಬ್ಬರೂ ಒಂದೇ ಟೆರೇಸ್‌ನ ಮೇಲೆ ಫೋಟೊಗಳನ್ನು ತೆಗೆಸಿಕೊಂಡಿರುವುದು ಸ್ಪಷ್ಟ ಎಂಬ ತೀರ್ಮಾನಕ್ಕೆ ಬಂದರು. ಕೆಲವು ಟೀವಿ ಚಾನಲ್‌ಗಳಲ್ಲೂ ಇದು ಪ್ರಸಾರವಾಯಿತು. ಒಂದೇ ಟೆರೇಸ್‌ನ ಮೇಲೆ ಇಬ್ಬರೂ ಫೋಟೊ ತೆಗೆಸಿಕೊಂಡಿರುವುದರಿಂದ ಒಂದೇ ಮನೆಯಲ್ಲಿ ವಾಸವಿದ್ದಾರೆ ಎಂಬ ತೀರ್ಮಾನಕ್ಕೆ ಅನೇಕರು ಬಂದಿದ್ದಾರೆ.

ಈ ವಿಷಯವಾಗಿ ವಿಜಯ್ ಆಗಲೀ, ರಶ್ಮಿಕಾ ಆಗಲೀ ತುಟಿ ಬಿಚ್ಚಿಲ್ಲ. ಶಿವ ನಿರ್ವಾಣ ನಿರ್ದೇಶನದಲ್ಲಿ ತಯಾರಾದ 'ಖುಷಿ' ತೆಲುಗು ಸಿನಿಮಾ ಇತ್ತೀಚೆಗಷ್ಟೆ ತೆರೆಕಂಡಿತು. ವಿಜಯ್, ಸಮಂತಾ ಅಭಿನಯದ ಈ ಕಡಿಮೆ ಬಜೆಟ್‌ನ ಸಿನಿಮಾ ದೊಡ್ಡ ಮಟ್ಟದಲ್ಲಿ ಸದ್ದು ಮಾಡಲಿಲ್ಲವಾದರೂ ಹಾಕಿದ ಬಂಡವಾಳಕ್ಕೆ ಮೋಸವಿಲ್ಲ ಎಂಬ ಸ್ಥಿತಿಯಲ್ಲಿದೆ. ರಶ್ಮಿಕಾ ಅಭಿನಯದ 'ಅನಿಮಲ್' ಹಿಂದಿ ಸಿನಿಮಾ ಹಾಗೂ 'ಪುಷ್ಪಾ 2' ಮೇಲೆಯೂ ನಿರೀಕ್ಷೆಯ ಭಾರವಿದೆ. ■



ರಶ್ಮಿಕಾ, ವಿಜಯ್ ದೇವರಕೊಂಡ